# ‘ಭ್ರಷ್ಟಾಚಾರ ಮುಕ್ತ ಭಾರತ’ಕ್ಕಾಗಿ

CPI(M)

## ಸಿಪಿಐ(ಎಂ)ಗೆ ಮತ ನೀಡಿ

## ಎಡಪಕ್ಷಗಳನ್ನು ಬಲಪಡಿಸಿ

: ಪ್ರಕಟಣೆ :

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿ

ಐದು ವರ್ಷಗಳ ಕಾಲ ಕೇಂದ್ರದಲ್ಲಿ ಅಧಿಕಾರ ನಡೆಸಿದ ಯುಪಿಎ ಮತ್ತು ವಿರೋಧ ಪಕ್ಷವಾದ ಬಿಜೆಪಿಗಳೆರಡು ಭ್ರಷ್ಟಚಾರದ ಹಗರಣಗಳಲ್ಲಿ ಮುಳುಗಿ ಹೋಗಿವೆ. ದೇಶದಲ್ಲಿ ಭ್ರಷ್ಟಚಾರವಿಲ್ಲದ ಅಥವಾ ಭ್ರಷ್ಟಾಚಾರ ಕುರಿತಾಗಿ ವರದಿಗಳಿಲ್ಲದ ಒಂದೇ ಒಂದು ದಿನಗಳು ಈ ಅವಧಿಯಲ್ಲಿ ಇರಲಿಲ್ಲವೆಂದೇ ಹೇಳಬಹುದು. ನವ ಉದಾರವಾದಿ ನೀತಿಗಳ ಭಾಗವಾಗಿ ಬೆಳೆದ ಈ ವ್ಯವಸ್ಥೆಯ ಭಾಗವಾಗಿ ದೊಡ್ಡ ಕಾರ್ಪೋರೆಟ್ ವಲಯ, ರಾಜಕಾರಣಿಗಳು ಹಾಗೂ ಅಧಿಕಾರಿಶಾಹಿ ವರ್ಗದೊಳಗೆ ಈ ಕುರಿತು ಒಂದು ಅನೈತಿಕ ಒಳಒಪ್ಪಂದವೇ ಏರ್ಪಟ್ಟಿದೆ.

ಕಾಂಗ್ರೆಸ್–ಬಿಜೆಪಿಗಳೆರಡು ಈ ನವ ಉದಾರವಾದಿ ನೀತಿಗಳನ್ನು ಮತ್ತಷ್ಟು ಬಲಪಡಿಸುವ ಕಾರ್ಯದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡಿವೆ. ಇಲ್ಲದಿದ್ದಲ್ಲಿ ಭಾರತದ ಕೋಟ್ಯಾಂತರ ಜನರ ಬದುಕಿನ ಮೇಲೆ ನೇರ ಹಾಗೂ ದೇಶದ ಆರ್ಥಿಕಾಭಿವೃದ್ಧಿ ಮೇಲೆ ಗಂಭೀರ ಪರಿಣಾಮ ಬೀರುವುದೆಂದು ಗೊತ್ತಿದ್ದರೂ ನಮ್ಮ ದೇಶದೊಳಗೆ ಬಹುದೊಡ್ಡ ವಿದೇಶಿ ಬಂಡವಾಳಿಗರಿಗೆ ಆ ಎರಡೂ ಪಕ್ಷಗಳೂ ಒಂದುಗೂಡಿ ಅವಕಾಶವೇಕೆ ನೀಡುತ್ತಿದ್ದವು. ? ಜಾಗತೀಕ ಸಂಪತ್ತಿನ ಒಡೆಯರಾದ ಕೇಲವೇ ಬಂಡವಾಳಿಗರನ್ನು ಆಹ್ವಾನಿಸುವ ಮೂಲಕ ಕೋಟ್ಯಾಂತರ ಜನರನ್ನು ಅಭದ್ರತೆಗೆ ದೂಡಿವೆ ಕಾಂಗ್ರೆಸ್ ಮತ್ತು ಬಿಜೆಪಿಗಳು. ಈ ಎರಡೂ ಪಕ್ಷಗಳ ಅನೈತಿಕ ಒಳಒಪ್ಪಂದವು ದೇಶವನ್ನು ಹಾಗೂ ದೇಶದ ಅಪಾರ ನೈಸರ್ಗಿಕ ಸಂಪನ್ಮೂಲಗಳ ಲೂಟಿಗೆ ಅವಕಾಶ ನೀಡಿದೆ.

ಕೇಂದ್ರದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರ್ಕಾರವಂತೂ ಭ್ರಷ್ಟಚಾರದ ವಿಷಯದಲ್ಲಿ ಹಿಂದೆಂದೂ ಕಂಡರಿಯದ ಇತಿಹಾಸವನ್ನೇ ನಿರ್ಮಿಸಿದೆ. ಇದರಲ್ಲಿ 2–ಜಿ ತರಗಾಂತರ ಹಗರಣ, ಕಲ್ಲಿದ್ದಲು ಹಂಚಿಕೆ ಹಗರಣ, ತೈಲ ಬೆಲೆನಿಗದಿ ಕುರಿತಾದ ಹಗರಣ, ಕಾಮನ್‌ವೆಲ್ತ್, ಆದರ್ಶ ಹೌಸಿಂಗ್, ಐಪಿಎಲ್ ಹಾಗೂ ಹೆಲಿಕಾಪ್ಟರ್ ಖರೀದಿಯಲ್ಲಾದ ಹಗರಣ ಹೀಗೆ ಸಾಲು..ಸಾಲು ಸೇರಿವೆ. ದೇಶವು ಸಾರ್ವತ್ರಿಕ ಚುನಾವಣೆಗೆ ಸಿದ್ದವಾಗುತ್ತಿರುವ ಈ ಸನ್ನಿವೇಶದಲ್ಲಿಯೂ 'ರೋಲ್ಸ್‌ರಾಯ್' ಕಂಪನಿಯು ತನ್ನ ಜೆಟ್‌ಎಂಜಿನ್ ಖರೀದಿಗಾಗಿ ಕಮೀಷನ್ ನೀಡಿರುವ ಅಂಶವು ಬಯಲಾಗಿದೆ. ಮತ್ತೊಂದೆಡೆ ಬಿಜೆಪಿಯು ತನ್ನ ಗುಜರಾತ್ ಆಡಳಿತದ ಅಭಿವೃದ್ಧಿ ಮಾದರಿಯನ್ನು ಮುಂದುಮಾಡಿದೆ. ಆದರೆ ಗುಜರಾತ್‌ನಲ್ಲಿ ನವ ಉದಾರೀಕರಣದ ನೇರ ಲಾಭ ಪಡೆದಿರುವ ದೊಡ್ಡ ಬಂಡವಾಳಿಗರು ಅತ್ಯಂತ ಕಡಿಮೆ ಬೆಲೆಯಲ್ಲಿ ಅಲ್ಲಿನ ನೈಸರ್ಗಿಕ ಸಂಪತ್ತನ್ನು ಕೊಳ್ಳೆ ಹೊಡೆದಿರುವುದು ಕಣ್ಣಿಗೆ ರಾಚುತ್ತಿದೆ. ಮತ್ತೊಂದಡೆ ಗಣಿ ಮಾಫಿಯಾದೊಂದಿಗೆ ಶಾಮೀಲಾಗಿ ಜೈಲುಪಾಲಾಗಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿಯನ್ನು ಮತ್ತೆ ತನ್ನ ಮಡಿಲಿಗೆ ಸೇರಿಸಿಕೊಳ್ಳುವ ಮೂಲಕ ಬಿಜೆಪಿ ಭ್ರಷ್ಟಚಾರದ ವಿಷಯದಲ್ಲಿ ಯುಪಿಎಗೂ ತನಗೂ ಏನೇನೂ ವ್ಯತ್ಯಾಸವಿಲ್ಲ ಎಂಬುದನ್ನು ಸಾಬೀತುಪಡಿಸಿದೆ.

## ಸುರಕ್ಷಿತ ತಾಣಗಳಲ್ಲಿದೆ 'ಕಪ್ಪುಹಣ'!

ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ದೇಶದಿಂದ ಅಕ್ರಮವಾಗಿ ವಿದೇಶಗಳಿಗೆ ಸಾಗಿಸ್ಪಟ್ಟಿರುವ ಒಟ್ಟು ಹಣದ ಪ್ರಮಾಣವೇಷ್ಟು ಗೊತ್ತೆ ? 20.92 ಲಕ್ಷಕೋಟಿ! ಈ ವಿಷಯವನ್ನು ಸ್ವತಃ ಕೇಂದ್ರ ಸರ್ಕಾರವೇ 2011 ರಲ್ಲಿ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರದಿಂದ ಗೊತ್ತಾಗಿದೆ. **"ಇದು ಸಾಮಾನ್ಯವಾಗಿ ತೆರಿಗೆಗಳ್ಳತನ, ಭ್ರಷ್ಟಚಾರ, ಲಂಚ, ರುಶುವತ್ತು ಹಾಗೂ ಅಪರಾಧ ಚಟುವಟಿಕೆಗಳ ಒಟ್ಟು ಉತ್ಪನ್ನವಾಗಿದೆ"** ಇದರಲ್ಲಿನ ಸುಮಾರು 9.64 ಲಕ್ಷ ಕೋಟಿಯಷ್ಟು ಹಣ ನಾಲ್ಕು ದಶಕಗಳ(1948–2008) ಅವಧಿಯದ್ದಾದರೆ, ಉಳಿದ 11.28 ಲಕ್ಷ ಕೋಟಿಗಳಷ್ಟು ಹಣ ಕೇವಲ 2008 ರಿಂದ 2010 ಅವಧಿಗೆ ಮಾತ್ರವೇ ಸಂಬಂಧಿದ್ದಾಗಿದೆ.! ಅಂದರೆ ಕೇವಲ 2 ವರ್ಷಗಳಲ್ಲಿ ದೇಶದಿಂದ ಅಕ್ರಮವಾಗಿ ಸಾಗಿಸಲ್ಪಟ್ಟ ಹಣದ ಪ್ರಮಾಣ 40 ವರ್ಷಗಳಿಂದ ಸಾಗಿಸಿದ್ದಕ್ಕಿಂತ ಹೆಚ್ಚು!

ಅಕ್ರಮವಾಗಿ ವಿದೇಶದಲ್ಲಿ ಬಚ್ಚಿಟ್ಟಿರುವ ಈ ಅಪಾರ ಸಂಪತ್ತನ್ನು ದೇಶಕ್ಕೆ ವಾಪಸ್ ತರುವ ಬಗ್ಗೆ ಯಾವುದೇ ಗಂಭೀರ ಪ್ರಯತ್ನವನ್ನು ಯುಪಿಎ–2 ಸರ್ಕಾರ ಮಾಡಲಿಲ್ಲ.ಬದಲಾಗಿ ಮತ್ತು ಅದರಲ್ಲಿ ಭಾಗಿದಾರರಾಗಿರುವವರ ರಕ್ಷಣೆಗೆ ಪ್ರಯತ್ನ ನಡೆಸಿತು. ಹಿಂದಿನ ಎನ್‌ಡಿಎ ಸರ್ಕಾರ ಅವಧಿಯಲ್ಲೂ ಇಂತಹ ಈ ಕಪ್ಪು ಹಣವನ್ನು ಸ್ವದೇಶಕ್ಕೆ ವಾಪಸ್ ತರುವ ಬಗ್ಗೆ ಯಾವುದೇ ಪ್ರಯತ್ನಗಳನ್ನು ನಡೆಸಲಿಲ್ಲ. ಅದಕ್ಕೆ ಬದಲಾಗಿ ವಾಜಪೇಯಿ ಸರ್ಕಾರದ ಅವಧಿಯಲ್ಲಿ ಬಂಡವಾಳಿಗರ ಅನುಕೂಲಕ್ಕಾಗಿ **'ದ್ವಿಮುಖ ತೆರಿಗೆ'** ವ್ಯವಸ್ಥೆಯನ್ನು ತೊಡೆದು ಹಾಕುವ ಭಾಗವಾಗಿ ಕುಖ್ಯಾತ ವಿಧಾನವೊಂದನ್ನು ಜಾರಿಗೊಳಿಸುವುದರ ಮೂಲಕ ತೆರಿಗೆ ವಂಚಕರು ಹಣ ಲೂಟಿಗೆ ಮತ್ತಷ್ಟು ಅವಕಾಶ ನೀಡಲಾಗಿತ್ತು.

## 20.92 ಲಕ್ಷಕೋಟಿ ಅಂದರೆ..?

* 20.92 ಲಕ್ಷಕೋಟಿ! ಅಂದರೆ ಸರ್ಕಾರದ ಒಟ್ಟಾರೆ ಯೋಜನೇತರ ವೆಚ್ಚ. ಇಷ್ಟು ಹಣದಿಂದ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳನ್ನು ಜಾರಿಮಾಡಬಹುದು ಮತ್ತು ಸರ್ಕಾರದ ಕಾರ್ಯಕಲಾಪಗಳನ್ನು ನಡೆಸಬಹುದು. ಅದು 2014–15 ಸಾಲಿನಲ್ಲಿ ಮಂಡಿಸಿದ ಮಧ್ಯಂತರ ಆಯ್ಯವ್ಯಯವಿದ್ದಂತೆ.
* ನಾವು ವಿದೇಶಗಳಿಂದ ಹಾಗೂ ವಿಶ್ವಬ್ಯಾಂಕ್ ಹಾಗೂ ಐಎಂಎಫ್ ನಂತಹ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲದ ಪ್ರಮಾಣದ ಎರಡರಷ್ಟಾಗುತ್ತದೆ.

## 20.92 ಲಕ್ಷಕೋಟಿ ಹಣದಿಂದ ಏನೆಲ್ಲಾ ಮಾಡಬಹುದು...?

ವಿದೇಶದಲ್ಲಿ ಅಕ್ರಮವಾಗಿ ಬಚ್ಚಿಟ್ಟಿರುವ ಈ 20.92 ಲಕ್ಷಕೋಟಿ ಹಣವನ್ನು ಒಂದು ವೇಳೆ ಸಾರ್ವಜನಿಕ ಉದ್ದೇಶಗಳಿಗೆ ಸರಿಯಾಗಿ ಬಳಸಿದರೆ...

- ಶಿಕ್ಷಣಕ್ಕೆ ಈಗ ನೀಡುತ್ತಿರುವ ಅನುದಾನಕ್ಕಿಂತ 14 ಪಟ್ಟು ಹೆಚ್ಚಿನ ಅನುದಾನ ಸಿಗುತ್ತದೆ. ಆರೋಗ್ಯ ಕ್ಷೇತ್ರಕ್ಕೆ 31 ರಷ್ಟು ಹೆಚ್ಚಿನ ಅನುದಾನ ದೊರೆಯುತ್ತದೆ.
- ನಮ್ಮ ಸಮಾಜದಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿರುವ ದಲಿತರು,ಆದಿವಾಸಿಗಳು ಹಾಗೂ ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಈಗಿನ ಅನುದಾನದ 14 ಪಟ್ಟು ಹಣ ವಿನಿಯೋಗಿಸಬಹುದು.
- ಈ ಹಣದಿಂದ ಈಗಿರುವ ಹಸಿವನ್ನು ನೀಗಿಸಿ ಎಲ್ಲರಿಗೂ ಆಹಾರ ಒದಗಿಸಬಹುದು.
- ದೇಶದ ಎಲ್ಲಾ ಕುಟುಂಬಗಳಿಗೂ ಎಲ್ಲರಿಗೂ ವಿದ್ಯುತ್ ಸೌಲಭ್ಯವನ್ನು ಒದಗಿಸಬಹುದಲ್ಲದೆ ಈಗಿನ ದರಗಳನ್ನು ಕಡಿಮೆ ಮಾಡಿ ನಮ್ಮ ದೇಶದ ರೈತರಿಗೆ ಹಾಗೂ ಹಿಂದುಳಿದ ಪ್ರದೇಶಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಬಹುದು.
- ಈ ಹಣದಿಂದ ನೂರಾರು ಹೊಸ ಕೈಗಾರಿಕೆಗಳನ್ನು ಆರಂಭಿಸಿ ಎಲ್ಲರಿಗೂ ಉದ್ಯೋಗಾವಕಾಶಗಳನ್ನು ಒದಗಿಸಬಹುದು.

**ಸಾರ್ವಜನಿಕ ಸಂಪನ್ಮೂಲಗಳು**
**ಖಾಸಗೀಯವರ ಲಾಭಕೋರತನವೂ...**

ದೇಶದಲ್ಲಿ ಜಾರಿ ಮಾಡಲಾಗಿರುವ ಈ ನವ ಉದಾರೀವಾದಿ ನೀತಿಗಳಿಂದಾಗಿ ನಮ್ಮ ದೇಶದ ಸಾರ್ವಜನಿಕ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ಖಾಸಗಿಯರವರಿಗೆ ವಹಿಸಿಕೊಡಲಾಗುತ್ತಿದೆ ಮತ್ತು ಈ ಕೃತ್ಯದ ಹಿಂದೆ ಭಾರೀ ಪ್ರಮಾಣದ ಲಂಚಗುಳಿತನ ಆಳವಾಗಿ ಬೇರೂರಿದೆ. ಇದಕ್ಕೆ ಜ್ವಲಂತ ಉದಾಹರಣೆ ಎಂದರೆ ನಮ್ಮ ದೇಶದ ದೊಡ್ಡ ಕಾರ್ಪೋರೇಟ್ ಉಧ್ಯಮವಾದ ರಿಲೆಯನ್ಸ್ ಕಂಪನಿಯು ಉತ್ಪಾದಿಸುವ ತೈಲ ಬೆಲೆ ನಿಗದಿಪಡಿಸುವಲ್ಲಿ ನೀಡಿರುವ ಭಾರೀ ಪ್ರಮಾಣದ ರಿಯಾಯಿತಿ. ಈ ವಿಷಯದಲ್ಲಿ ದೇಶದ ಬೊಕ್ಕಸಕ್ಕಾದ ಅನ್ಯಾಯದ ವಿರುದ್ಧ 2007 ರಿಂದಲೇ ಎಡಪಕ್ಷಗಳು ಸಂಸತ್ತಿನಲ್ಲಿ ಧ್ವನಿ ಎತ್ತಿದ್ದವು. **ಭಾರತದ ಸಂವಿಧಾನದ ಅನುಚ್ಛೇಧ 297(1)ವು ಹೇಳುವುದೇನೇಂದರೆ "ಭಾರತದ ರಾಜಕ್ಷೇತ್ರೀಯ ಸಮುದ್ರದಲ್ಲಿನ ಅಥವಾ ಕಾಂಟಿನೆಂಟಲ್ ಶೆಲ್ಫ್‌ನಲ್ಲಿನ ಅಥವಾ ಅನನ್ಯ ಆರ್ಥಿಕವಲಯದಲ್ಲಿನ ಸಾಗರದ ಕೆಳಗಿರುವ ಎಲ್ಲಾ ಭೂಮಿಗಳು, ಖನಿಜಗಳು ಮತ್ತು ಬೆಲೆಬಾಳುವ ಇತರ ವಸ್ತುಗಳು ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು ಮತ್ತು ಒಕ್ಕೂಟದ ಉದ್ದೇಶಗಳಿಗಾಗಿ ಅದರ ವಶದಲ್ಲಿರತಕ್ಕದು"** ಅಂದರೆ ದೇಶದ ಎಲ್ಲ ತೈಲೊತ್ಪನ್ನಗಳು ಹಾಗು ನೈಸರ್ಗಿಕ ಸಂಪನ್ಮೂಲಗಳ ಒಡೆತನವು ಸರ್ಕಾರಕ್ಕೆ ಹಾಗೂ ದೇಶದ ಜನತೆಗೆ ಸೇರಿದಂತಾವುಗಳಾಗಿವೆ. ಮುಂದುವರೆದು ಸಂವಿಧಾನದಲ್ಲಿ ಹೇಳುವುದೇನೆಂದರೆ ಪ್ರಭುತ್ವದ ಒಡೆತನದಲ್ಲಿರುವ ಈ ನೈಸರ್ಗಿಕ ಸಾಮಾಗ್ರಿಗಳು ಎಲ್ಲಾ ಜನರಿಗೆ ಸಮಾನವಾಗಿ ಹಂಚಿಕೆಯಾಗುವಂತಹ ಜವಬ್ದಾರಿಯನ್ನು ಸರಕಾರ ನಿರ್ವಹಿಸಬೇಕು ಎಂದಿದೆ. ಆದರೆ

ಯುಪಿಎ ಸರ್ಕಾರ ಸಂವಿಧಾನದ ಎಲ್ಲಾ ನಿಯಮವಳಿಗಳನ್ನು ಸಂಪೂರ್ಣ ಗಾಳಿಗೆ ತೂರಿ ಆಂಧ್ರದ ಗೋದಾವರಿ ಕಣಿವೆಯಲ್ಲಿದ್ದ ಅಪಾರ ಪ್ರಮಾಣದ ತೈಲ ನಿಕ್ಷೇಪವನ್ನು ಖಾಸಗೀ ರಿಲೆಯನ್ಸ್ ಕಂಪೆನಿಗೆ ಧಾರೆ ಎರೆದಿದೆ ಇದು ಭಾರೀ ಪ್ರಮಾಣದ ಭ್ರಷ್ಟಚಾರಕ್ಕೆ ಕಾರಣವಾಗಿದೆ. ವಿರೋಧ ಪಕ್ಷವಾದ ಬಿಜೆಪಿ ಕಾಂಗ್ರೆಸ್ ಈ ಎಲ್ಲಾ ನೀತಿಗಳಿಗೆ ಒಪ್ಪಿಗೆ ನೀಡುವ ಮೂಲಕ ಅಪಾರ ಪ್ರಮಾಣದಲ್ಲಿ ನಡೆದಿರುವ ಈ ಹಗರಣವನ್ನು ಮೌನವಾಗಿ ಬೆಂಬಲಿಸಿದೆ.

ಸರ್ವೋಚ್ಛ ನ್ಯಾಯಲಯದಲ್ಲಿ ಸ್ವತಃ ರಿಲೆಯನ್ಸ್ ಕಂಪನಿಯೇ ಒಂದು **'ಎಂಬಿಟಿಯು'** ಪ್ರಮಾಣದ ತೈಲ ಉತ್ಪಾದನೆಗೆ ಒಂದು ಡಾಲರ್‌ನಷ್ಟು ಉತ್ಪಾದನಾ ವೆಚ್ಚವಾಗುತ್ತಿದೆ ಎಂಬುದನ್ನು ಒಪ್ಪಿಕೊಂಡಿದ್ದಾಗ್ಯೂ ಅದರ ಉತ್ಪಾದನಾ ವೆಚ್ಚವಾಗಿ ಈಗಾಗಲೇ 4 ಡಾಲರ್ ಪಡೆಯುತ್ತಿದೆ. ಇದೀಗ ಸರ್ಕಾರವೇ ಅದರ ಪ್ರಮಾಣವನ್ನು 8 ಡಾಲರ್‌ಗೆ ಹೆಚ್ಚಿಸಲು ಒಪ್ಪಿಕೊಂಡಿದೆ. ಇದರ ಪರಿಣಾಮ ಎಂದರೆ; ಬರುವ ದಿನಗಳಲ್ಲಿ ವಿದ್ಯುತ್ ದರಗಳು ಹಾಗೂ ರಸಗೊಬ್ಬರ ಬೆಲೆಗಳು ಏರಿಕೆಯಾಗುವುದು ಗ್ಯಾರಂಟಿ.

ಒಂದು ವೇಳೆ ಇದೇ ರಿಲೆಯನ್ಸ್ ಕಂಪನಿ ಉತ್ಪಾದಿಸುವ ಅನಿಲವನ್ನು ಸ್ವತಃ ಸರ್ಕಾರವೇ ಪ್ರತಿ ಕೆ.ಜಿ,ಗೆ 2.34 ಡಾಲರ್‌ಗೆ ಖರೀದಿ ಮಾಡಿದರೂ ಸಹಾ ಗೋದಾವರಿ ಕಣಿವೆ ಪ್ರದೇಶದಲ್ಲಿ ಬರುವ ಆಂಧ್ರ ಪ್ರದೇಶದ ಎಲ್ಲಾ ಕುಟುಂಬಗಳಿಗೂ ಕೇವಲ 100 ರೂಪಾಯಿ ಬೆಲೆಯಲ್ಲಿ ಅಡಿಗೆ ಅನಿಲ ಸರಬರಾಜು ಮಾಡಬಹುದು ಮಾತ್ರವಲ್ಲ ಅಲ್ಲಿರುವ ಎಲ್ಲಾ ರೈತರಿಗೂ ಉಚಿತವಾಗಿ ವಿದ್ಯುತ್‌ನ್ನು ನೀಡಬಹುದಾಗಿದೆ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ದೇಶದ ಜನರ ಹಿತಾಸಕ್ತಿಗಿಂತಲೂ ನಮ್ಮ ದೇಶದ ದೊಡ್ಡ ಉದ್ಯಮವಾದ ರಿಲೆಯನ್ಸ್ ಕಂಪನಿಯ ಬಗ್ಗೆಯೇ ಅಪಾರ ಕಾಳಜಿ ವ್ಯಕ್ತಪಡಿಸುತ್ತಿದೆ.

ಕರ್ನಾಟಕದಲ್ಲಿ ತನ್ನ ಅಧಿಕಾರದ ಅವಧಿಯಲ್ಲಿ ನಡೆದ ಬೃಹತ್ ಪ್ರಮಾಣದ ಭ್ರಷ್ಟಚಾರ ವಿಷಯವಾಗಿ ಬಿಜೆಪಿ ಇದೇ ರೀತಿ ನಡೆದುಕೊಂಡಿತ್ತು. ರಾಜ್ಯದಲ್ಲಿರುವ ಅಪಾರ ಪ್ರಮಾಣದ ಖನಿಜ ಗಣಿ ಸಂಪತ್ತನ್ನು ಲೂಟಿ ಹೊಡೆಯಲು ಬಳ್ಳಾರಿ ರೆಡ್ಡಿ ಸಹೋದದರಿಗೆ ಅವಕಾಶ ನೀಡಿತ್ತು. ಲೋಕಾಯುಕ್ತ ವರದಿ ಹೇಳಿದಂತೆ ಪ್ರತಿದಿನವೂ ರೆಡ್ಡಿ ಸಹೋದರರ ಲಾಭದ ಪ್ರಮಾಣವು 17 ಕೋಟಿಯಷ್ಟಿತ್ತು ಈ ಮೂಲಕ ಸಾವಿರಾರು ಕೋಟಿ ಹಣವನ್ನು ರೆಡ್ಡಿ ಸಹೋದರರು ಲೂಟಿ ಮಾಡಿದ್ದಾರೆ.

### 'ಮೋದಿ ಮಾದರಿ ಭ್ರಷ್ಟಚಾರ'

ಬಿಜೆಪಿಯ ನರೇಂದ್ರ ಮೋದಿ ಇವತ್ತು ದೇಶದಲ್ಲಿ ಜಾರಿಯಾಗುತ್ತಿರುವ ನವ ಉದಾರಿನೀತಿಗಳ ಜಾರಿಗೆ ಕಂಕಣ ಬದ್ದನಾಗಿರುವ ಒಬ್ಬ ಆಡಳಿತಗಾರ ಮಾತ್ರವಲ್ಲ ಗುಜಾರಾತ್‌ನಲ್ಲಿ ಅಂತಹ ನೀತಿಗಳನ್ನು ಜಾರಿ ಮಾಡುವ ಮೂಲಕ **'ಬಂಡವಾಳಿಗರ ಪರಮಾಪ್ತಮಿತ್ರ'**ರಾಗಿದ್ದಾರೆ. ಭ್ರಷ್ಟಚಾರದ ಬಗ್ಗೆ ಮೇಲಿಂದ ಕೆಳಗೆಲ್ಲಾ ಮಾತನಾಡುವ ನರೇಂದ್ರ ಮೋದಿಯ ಗುಜರಾತ್ ರಾಜ್ಯದಲ್ಲಿ ಇದುವರೆಗೂ ಲೋಕಾಯುಕ್ತರೇ ಇರಲಿಲ.!

ಇದೀಗ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಮಾತ್ರವೇ ಅಲ್ಲಿ ಲೋಕಾಯುಕ್ತರ ನೇಮಕವಾಗಿದೆ. ಅಲ್ಲಿ ಹಲವು ವರ್ಷಗಳವರಗೂ ಲೋಕಯುಕ್ತ ನೇಮಕವಾಗದೆ ಇರುವುದಕ್ಕೆ ಆಶ್ಚರ್ಯವೇನೂ ಪಡಬೇಕಾಗಿಲ್ಲ. ಯಾಕೆಂದರೆ ಅಲ್ಲಿ ಹಲವು ಭ್ರಷ್ಟಚಾರಗಳ ಒಳ ವ್ಯವಹಾರಗಳು ಕುದುರಿದ್ದವು. ಗುಜರಾತ್‌ನಲ್ಲಿ ಅತ್ಯಂತ ದುಗ್ಗಾಣಿ ಬೆಲೆಗೆ ರೈತರ ಭೂಮಿಯನ್ನು ಕಸಿದುಕೊಂಡು ಬಂಡವಾಳಿಗರಿಗೆ ಹಸ್ತಾಂತರಿಸಲಾಗಿದೆ. ರೈತರಿಂದ ಅತ್ಯಂತ ನಿಷ್ಕೃಷ್ಟ ಬೆಲೆಗೆ ಕೊಂಡ ಈ ಬೆಲೆಯನ್ನು ಅಪಾರ ಪ್ರಮಾಣದ ಬೆಲೆಗೆ ಮರು ಮಾರಾಟ ಮಾಡಿ ಅಪಾರ ಪ್ರಮಾಣದ ಲಾಭವನ್ನು ಈ ಬಂಡವಾಳಿಗರು ಮಾಡಿಕೊಂಡಿದ್ದಾರೆ. ಇನ್ನು 'ಬೆಳಗುತ್ತಿರುವ ಗುಜರಾತ್'ನ ಮತ್ತೊಂದು ಕಥೆಯು ಮತ್ತೊಬ್ಬ ಬಂಡವಾಳಿಗ ಅದಾನಿಗೆ ಸಂಬಂಧಿಸಿದ್ದು. ಗುಜರಾತ್‌ನಲ್ಲಿ 2002ರಲ್ಲಿ ಮೋದಿ ಅಧಿಕಾರಕ್ಕೆ ಬಂದಾಗ ಅವನ ಬಳಿ ಇದ್ದ ಒಟ್ಟು ಬಂಡವಾಳದ ಮೌಲ್ಯ 2816 ಕೋಟಿ ರುಪಾಯಿ. ಆದರೆ ಮೋದಿ ಆಡಳಿತದ ಕೃಪಕಾಟಾಕ್ಷದಿಂದಾಗಿ ಅವರ ಆಸ್ತಿಯು ಇದೀಗ 35,881 ಕೋಟಿಯಷ್ಟಾಗಿದೆ.!

## 'ಮುಂದ್ರಾ ಬಂದರಿನಿಂದ ತುಂಬಿತು... ಅದಾನಿ ಬೊಕ್ಕಸ'

ಮೋದಿ ಮೇಲೆ ಪ್ರಭಾವ ಬೀರಿದ ಅದಾನಿ ಕಂಪನಿಯೂ 203–04 ರಲ್ಲಿ ಮುಂದ್ರಾ ಬಂದರಿನಲ್ಲಿ 'ವಿಶೇಷ ಆರ್ಥಿಕ ವಲಯ ಸ್ಥಾಪನೆ ಹೆಸರಿನಲ್ಲಿ 6700 ಹೆಕ್ಟೇರ್ಸ್ ಭೂಮಿಯನ್ನು ತನ್ನದಾಗಿಸಿಕೊಂಡಿತು. ಇದಕ್ಕಾಗಿ ಅಪಾರ ಪ್ರಮಾಣದ ಭೂಮಿಯನ್ನು ಗುಜರಾತ್ ಸರ್ಕಾರ ರೈತರಿಂದ ವಶಪಡಿಸಿಕೊಂಡು ಆ ಕಂಪನಿಗೆ ಹಸ್ತಾಂತರಿಸಿತ್ತು. ಹೀಗೆ ನೀಡಲಾದ ಭೂಮಿಗೆ ಸರ್ಕಾರ ಪ್ರತಿ ಚ.ಮೀ ಗೆ ನಿಗದಿಪಡಿಸಿದ್ದ ಬೆಲೆ ಕೇವಲ 1 ರೂಪಾಯಿಯಿಂದ 32 ರುಪಾಯಿಗಳು ಮಾತ್ರವಾದರೂ ಅದಾನಿ ಕಂಪನಿಗೆ ನಿಗದಿ ಪಡಿಸಿದ ದರ ಕೇವಲ ಪ್ರತಿ ಚ.ಮೀ ಗೆ ಕೇವಲ 10 ರೂ ಮಾತ್ರ.! ಈ ಭೂಮಿಯನ್ನು ಪಡೆದ ಕಂಪನಿಯು ಅಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಉಪ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ಇತರೆ ಖಾಸಗಿಯವರಿಗೆ ಪ್ರತಿ.ಚ.ಮೀ ಗೆ 1000 ರುಪಾಯಿ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡಿ ಅಪಾರ ಲಾಭ ಮಾಡಿಕೊಂಡಿತು. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ 10.000 ಸಾವಿರ ಕೋಟಿ ಹಣ ಅದಾನಿ ಕಂಪನಿ ಸೇರಿತ್ತು.!

## ಮತ್ತೆ ಅದಾನಿ ಗುಂಪಿಗೆ ಬಂಪರ್ ಕೊಡುಗೆ

ಗುಜಾರಾತ್‌ನ ನರೇಂದ್ರ ಮೋದಿ ಸರ್ಕಾರವೂ ಇಷ್ಟಕ್ಕೆ ಸುಮ್ಮನಾಗಲಿಲ್ಲ. ಅದು ಜನರಿಗೆ ಹೊರೆಯಾಗುವ ರೀತಿಯಲ್ಲಿ ಅದಾನಿ ಕಂಪನಿಯು ಉತ್ಪಾಧಿಸಿದ ವಿದ್ಯುತ್‌ನ್ನು ಅತಿ ಹೆಚ್ಚಿನ ಬೆಲೆ ನೀಡಿ ಖರೀದಿಸುವ ಮೂಲಕ ಮತ್ತಷ್ಟು ಬಂಪರ್(ಸೂಪರ್) ಲಾಭವನ್ನು ಅದಾನಿ ಕಂಪೆನಿಗೆ ನೀಡಿತು. ಅದು 2006 ಕಾಲಘಟ್ಟ ಗುಜರಾತ್ ವಿದ್ಯುತ್ ಕೊರತೆಯನ್ನು ಎದುರಿಸುತ್ತಿದ್ದಾಗ ಅದನ್ನು ನಿವಾರಿಸಲು ಗುಜರಾತ್‌ನ

ವಿದ್ಯುತ್ ವಿಕಾಸ ನಿಗಮವು(ಜಿಯುವಿಎನ್ಎಲ್) ಖಾಸಗಿ ವಿದ್ಯುತ್ ಕಂಪನಿಗಳಿಂದ ಸುಮಾರು 3000 ಮೇಗಾವ್ಯಾಟ್ ವಿದ್ಯುತ್ ಖರೀದಿಸುವ ನಿರ್ಧಾರ ಕೈಗೊಂಡಿತು. ಇದಕ್ಕಾಗಿ ಅದಾನಿ ಗ್ರೂಫ್ ಆಫ್ ಪ್ರೊಡಕ್ಸನ್ ಜೊತೆ ಒಟ್ಟು ಎರಡು ವಿದ್ಯುತ್ ಖರೀದಿ ಒಪ್ಪಂದಕ್ಕೆ(ಪಿಪಿಎ) ಸಹಿಹಾಕಿತು. ಅದರ ಪ್ರಕಾರ ಪ್ರತಿಯೂನಿಟ್‌ಗೆ ಕ್ರಮವಾಗಿ ರೂ.2.89 ಹಾಗೂ ರೂ.2.35 ರಂತೆ ಬೆಲೆ ನಿಗದಿ ಮಾಡಲಾಯಿತು. ಆದರೆ ಆಶ್ಚರ್ಯದ ಸಂಗತಿ ಎಂದರೆ ಈ ಖರೀದಿ ಒಪ್ಪಂದಕ್ಕೆ ಕೇಲವೇ ದಿನಗಳ ಹಿಂದೆ ಇದೇ ಗುಜರಾತ್‌ನ ವಿದ್ಯುತ್ ವಿಕಾಸ ನಿಗಮವು(ಜಿಯುವಿಎನ್ಎಲ್) ಕೊಸ್ಟಲ್ ಗುಜರಾತ್ ಪವರ್ ಪ್ರಾಜೆಕ್ಟ್ ಎನ್ನುವ ಇನ್ನೊಂದು ಖಾಸಗಿ ಕಂಪನಿ ಜೊತೆ ಕೇವಲ 2.26 ರೂಪಾಯಿಗೆ ಪ್ರತಿ ಯೂನಿಟ್‌ನಂತೆ ಖರೀದಿ ಒಪ್ಪಂದ ಮಾಡಿಕೊಂಡಿತ್ತು. ಅಂದರೆ ಅದಾನಿ ಕಂಪೆನಿ ಜೊತೆ ಮಾಡಿಕೊಂಡ ಒಪ್ಪಂದಕ್ಕಿಂತ 63 ಪೈಸೆ ಕಡಿಮೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು ಸಾಮಾನ್ಯ ಲೆಕ್ಕಚಾರದಲ್ಲಿ ಕಂಡು ಬಂದಂತೆ ಗುಜರಾತ್‌ನ ವಿದ್ಯುತ್ ವಿಕಾಸ ನಿಗಮವು(ಜಿಯುವಿಎನ್ಎಲ್) 2011 ರಲ್ಲಿ ಅದಾನಿ ಕಂಪನಿ ಸರಬರಾಜು ಮಾಡಿದ 7000 ಮಿಲಿಯನ್ಸ್ ಯೂನಿಟ್‌ಗೆ ಪ್ರತಿಯಾಗಿ ರೂ 441 ಕೋಟಿ ಹಾಗೂ 2012 ರಲ್ಲಿ ಕೊನೆಗೊಂಡ ಮತ್ತು 14,393 ಯೂನಿಟ್ ಖರೀದಿಗೆ ಪ್ರತಿಯಾಗಿ ರೂ. 906 ಕೋಟಿ ಹಣವನ್ನು ನೀಡಿತ್ತು. ಅಂದರೆ ಒಟ್ಟಾರೆ ರೂ.1347 ಕೋಟಿ ಬಂಪರ್ ಲಾಭವನ್ನು ಅದಾನಿ ಕಂಪನಿ ತನ್ನದಾಗಿಸಿಕೊಂಡಿತು. ಆದರೆ ಹೀಗೆ ಅಧಾನಿಗೆ ಸಾವಿರಾರು ಕೋಟಿ ನೀಡಿದ ಮೋದಿ ಮತ್ತೊಂದಡೆ ಗುಜರಾತ್ ಬಿಜೆಪಿ ಸರ್ಕಾರವು ಆ ರಾಜ್ಯದ ಸಾಮಾನ್ಯ ಬಳಕೆದಾರರಾದ ಜನ ಸಾಮಾನ್ಯರು, ರೈತರ ಮೇಲೆ ವಿದ್ಯುತ್ ಬೆಲೆಏರಿಕೆಯ ಪ್ರಹಾರ ನಡೆಸಿತು.

## ಟಾಟ ಮತ್ತು ಎಸ್ಸಾರ್ ಗ್ರೂಫ್‌ಗೂ 'ಮೋದಿ ಪ್ರಸಾದ'

ಯುಪಿಎ ಸರ್ಕಾರದ ಬಹು ದೊಡ್ಡ 2.ಜಿ ತರಗಾಂತರ ಹಗರಣದ ಪ್ರಮುಖ ಭಾಗೀಧಾರರರಾದ ದಿ ಎಸ್ಸಾರ್ ಗ್ರೂಫ್ ಕಂಪನೀಸ್ ಹಾಗೂ ಟಾಟಾ ಟೆಲಿಕಮ್ಯೂನಿಕೇಷನ್ ಈ ಎರಡೂ ಕಂಪನಿಗಳು ಗುಜರಾತ್ ನರೇಂದ್ರಮೋದಿಯಿಂದಲೂ 'ಸಿಹಿಮುತ್ತಿನ ಕಾಣಿಕೆ' ವ್ಯವಹಾರ ಕುದುರಿಸಿವೆ. ಅದರ ಅನ್ವಯ 2,07,60,000 ಚ.ಮೀ ಅದರಲ್ಲಿ ಭಾಗಶಃ ಕರಾವಳಿ ಹಾಗೂ ಅರಣ್ಯ ಪ್ರದೇಶವನ್ನೊಳಗೊಂಡ ಭೂಮಿಯನ್ನು ಆ ಕಂಪನಿಗಳಿಗೆ ನೀಡಲಾಗಿದೆ. ಸರ್ಕಾರದ ಈ ಕ್ರಮದ ವಿರುದ್ದ ಅರಣ್ಯ ಉಪ ಸರಂರಕ್ಷಣಾಧಿಕಾರಿಯು 1927 ರ ಆರಣ್ಯ ಕಾಯ್ದೆ ಅಡಿಯಲ್ಲಿ ಅಪರಾಧ ಕ್ರೈಮ್–11/2/2006 ಕೇಸು ದಾಖಲಿಸಿ ಅದರ ಅಡಿಯಲ್ಲಿ ನಾಲ್ಕು ಶಿಕ್ಷಾರ್ಹ ಆರೋಪಗಳನ್ನು ಹೊರಿಸಲಾಗಿದೆ. ಆದರೆ ಗುಜರಾತ್ ಸರ್ಕಾರ ಆ ಎಲ್ಲಾ ಆರೋಪಗಳಿಗೆ ಉತ್ತರವಾಗಿ ಆ ಅಕ್ರಮಣದಾರ ಕಂಪನಿಗಳಿಗೆ 20 ಲಕ್ಷ ಜುಲ್ಮಾನೆಯನ್ನು ವಿಧಿಸುವ ಮೂಲಕ ಆ ಎಲ್ಲಾ ಪ್ರಕರಣಗಳಿಗೆ ಎಳ್ಳು–ನೀರು ಬಿಟ್ಟಿತು. ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ನಿರ್ಮಾಣ ಮಾಡಿರುವ

ಕಟ್ಟಡಗಳನ್ನು ತೆರವುಗೊಳಿಸಬೇಕು ಮತ್ತು ವಶಪಡಿಸಿಕೊಂಡ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯ ವಶಕ್ಕೆ ನೀಡಬೇಕೆನ್ನುವ ಆದೇಶವನ್ನು ಅಲ್ಲಿನ ರಾಜ್ಯ ಸರ್ಕಾರ ಇದುವರೆಗೂ  ಜಾರಿಗೊಳಿಸುವ ಗೊಡವೆಗೆ ಹೋಗಿಲ್ಲ. ಎಸ್ಸಾರ್ ಕಂಪನಿಯೂ ಈಗಲೂ ಅದೇ ಅತಿಕ್ರಮಣ ಜಾಗದಲ್ಲಿ ತನ್ನೆಲ್ಲಾ ಕಾರ್ಯಗಳನ್ನು ನಿರಂತರವಾಗಿಯೇ ನಡೆಸುತ್ತಿದೆ. ಅದರ ವಶದಲ್ಲಿರುವ ಭೂಮಿಯ ಇವತ್ತಿನ ಮಾರುಕಟ್ಟೆ ಮೌಲ್ಯವೇ ಪ್ರತಿ.ಚ.ಮೀಗೆ ರೂ. 3000ಕ್ಕಿಂತ ಹೆಚ್ಚಾಗುತ್ತದೆ. ಅಂದರೆ ಆ ಕಂಪನಿಗಳಿಗೆ ನೀಡಿರುವ ಭೂಮಿಯ ಒಟ್ಟಾರೆ ಮೊತ್ತ ರೂ.6,228 ಕೋಟಿ.! ಇದು ಸರ್ಕಾರ ಖಜಾನೆಗೆ ಆದರ ನಷ್ಟ ಒಂದಡೆಯಾದರೆ ಎಲ್ಲಕ್ಕಿಂತ ಹೆಚ್ಚಾಗಿ ಮತ್ತೊಂದಡೆ ನಮ್ಮ ಪರಿಸರದ ಮೇಲಾದ ಅತಿದೊಡ್ಡ ದಾಳಿ ಇದಾಗಿದೆ.

ಪ.ಬಂಗಾಳದಿಂದ ಟಾಟಾ ಕಂಪನಿಯನ್ನು ಗುಜರಾತ್‌ಗೆ ಕರೆತಂದ ಮೋದಿ ಸರ್ಕಾರ ಅದಕ್ಕಾಗಿ ನೀಡಿದ ಒಟ್ಟು ರಿಯಾಯ್ತಿಯೇ ಒಟ್ಟು 33,000 ಕೋಟಿಯಷ್ಟು ಎಂದು ಅಂದಾಜು ಮಾಡಲಾಗಿದೆ. 'ನಾನೋ' ಕಾರು ತಯಾರಿಕಾ ಘಟಕ ಸ್ಥಾಪನೆ ಜೊತೆಗೆ ಟಾಟಾ ಕಂಪನಿಗೆ ಅಲ್ಲಿನ ಭೂ ಆಳದಲ್ಲಿರುವ ನೈಸರ್ಗಿಕ ನೀರಿನ ಸೆಲೆಯನ್ನು ಕೊಳ್ಳೆ ಹೊಡೆಯಲು  ಅವಕಾಶ ಕಲ್ಪಿಸಲಾಗಿದೆ. ಆದರೆ ಅದೇ ವೇಳೆಗೆ ಆ ಪ್ರದೇಶದ ರೈತರು ತಮ್ಮ ಬಾಯಾರಿದ ಬರಡು ಭೂಮಿಗೆ ನೀರುಣಿಸಿ ಬೆಳೆ ಬೆಳೆಯುವ ಸಲುವಾಗಿ ಈಗಲೂ ಕಾಯುತ್ತಿರುವ ಘೋರ ಸತ್ಯ ಮಾತ್ರ ನರೇಂದ್ರ ಮೋದಿಗೆ ಕಾಣುತ್ತಿಲ್ಲ.

**ಕೃಷಿ ವಿ.ವಿ ಭೂಮಿ–ಐಷಾರಾಮಿ ಹೊಟೇಲ್‌ಗೆ !**

ಇದು ಗುಜರಾತ್ ಮಾದರಿಗೆ ಮತ್ತೊಂದು ಸೇರ್ಪಡೆ ಕಥೆ.! ಗುಜರಾತ್‌ನ ಸೂರತ್‌ನಲ್ಲಿರುವ ನವರಾಶಿ ಕೃಷಿವಿಶ್ವವಿದ್ಯಾಲಯವು 108 ವರ್ಷಗಳಷ್ಟು ಹಳೆಯದಾದ ವಿಶ್ವವಿದ್ಯಾಲಯ. ಇದರ ಅತ್ಯಂತ ಪ್ರಮುಖ ಜಾಗದಲ್ಲಿರುವ ಭೂ ಪ್ರದೇಶವನ್ನು 'ಚಹಾತ್ರಾಲ ಇಂಡಿಯ ಹೊಟೇಲ್ ಗ್ರೂಫ್‌ಗೆ' ಏಳು ಅಂತಸ್ತಿನ ಐಷರಾಯಿ ಹೊಟೇಲ್ ನಿರ್ಮಿಸಲು ಹಂಚಿಕೆ ಮಾಡಲಾಗಿದೆ. ಮಾರುಕಟ್ಟೆಯಲ್ಲಿ ಆ ಭೂಮಿಯ ಮೌಲ್ಯ 1.ಚ.ಮೀಗೆ 1 ಲಕ್ಷ ರುಪಾಯಿಗಳಾಗಿದ್ದರೆ, ಸರ್ಕಾರ ಮಾತ್ರ ಕೇವಲ 15,000 ರುಪಾಯಿಗಳಿಗೆ ಪ್ರತಿ.ಚ.ಮೀ ನಂತೆ ಆ ಹೊಟೇಲ್‌ಗೆ ಭೂಮಿ ಹಂಚಿಕೆ ಮಾಡಿದೆ. ಆದರೆ ಸರ್ಕಾರದ ಈ ನಿರ್ಧಾರವನ್ನು ಸರ್ವೂಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ ನಂತರ ಸರ್ಕಾರ ಕೇವಲ ಅದರ ಬೆಲೆಯನ್ನು ಸ್ವಲ್ಪ ಪ್ರಮಾಣದಲ್ಲಿ ಅಂದರೆ ಪ್ರತಿ.ಚ.ಮೀಗೆ ರೂ.35.000ಕ್ಕೆ ಏರಿಸಲಾಯಿತು.

ಇನ್ನೂ ಲಾರ್ಸೆನ್ ಅಂಡ್ ಟೌಬ್ರೋ(ಎಲ್‌ಅಂಡ್‌ಟಿ) ಕಂಪನಿಗೆ ಸೂರತ್‌ನ ಹಜ್ಜಿರಾ ಕೈಗಾರಿಕಾ ಪ್ರದೇಶದಲ್ಲಿ ಬೆಲೆಬಾಳುವ 8,00,000 ಚ,ಮೀ ಜಾಗವನ್ನು ಯಾವುದೇ ಹರಾಜು ಪ್ರಕ್ರಿಯೆ ನಡೆಸದೇ ಕೇವಲ ಪ್ರತಿ ಚ.ಮೀಗೆ ಕೇವಲ 1 ರುಪಾಯಿ ದರದಲ್ಲಿ ಹಂಚಿಕೆ ಮಾಡಲಾಯಿತು. ಆದರೆ ಆ ಪ್ರದೇಶದಲ್ಲಿ ಆ ಸಂದರ್ಭದಲ್ಲಿ ಆಗ

ಇದ್ದ ಮಾರುಕಟ್ಟೆ ಮೌಲ್ಯ ಪ್ರತಿ.ಚ.ಮೀಗೆ ರೂ.3500–00. ಅಂದರೆ ಸರ್ಕಾರಕ್ಕೆ ಬರಬೇಕಾದ ಅಪಾರ ಪ್ರಮಾಣದ ಹಣ ಖಾಸಗಿಯವರ ಪಾಲಾಯಿತು.!

**ಸುಜಲಾಂ–ಸುಫಾಲಂ ನಲ್ಲಿ 500 ಕೋಟಿ ಹಗರಣ :**

2009 ರಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಿಕ್ಕ ಮಾಹಿತಿ ಪ್ರಕಾರ ಗುಜರಾತ್‌ನಲ್ಲಿ ಜಾರಿಯಲ್ಲಿದ್ದ ಸುಜಲಾಂ–ಸುಫಾಲಂ ಯೋಜನೆಯಲ್ಲಿ ಸುಮಾರು 1700 ಕೋಟಿ ಹಗರಣ ನಡೆದಿರುವುದು ಬಯಲಾಗಿದೆ. 2003 ರಲ್ಲಿ ನರೇಂದ್ರ ಮೋದಿ ಉತ್ತರ ಗುಜರಾತ್‌ನಲ್ಲಿ ನೀರಾವರಿ ಸೌಲಭ್ಯ ಹಾಗೂ ನೀರು ಸರಬರಾಜು ಮಾಡುವ ಸಲುವಾಗಿ ಸುಮಾರು 6,237.33 ಕೋಟಿ ಮೊತ್ತದ ಯೋಜನೆಯೊಂದನ್ನು ಪ್ರಕಟಿಸಿದ್ದರು. ಇದರಲ್ಲಿ 2,063 ಕೋಟಿ ಮೊತ್ತದ ಒಂದು ಭಾಗದ ಕೆಲಸವನ್ನು ಸರ್ಕಾರಿ ಸ್ವಾಮ್ಯದ ಗುಜರಾತ್ ಜಲಸಂಪನ್ಮೂಲ ಅಭಿವೃದ್ಧಿ ನಿಗಮಕ್ಕೆ 2005 ಇಸ್ವಿಯೊಳಗೆ ಮುಗಿಸಬೇಕೆಂದು ಸೂಚಿಸಿ ನೀಡಲಾಯಿತು. ಆದರೆ 2008 ನೇ ಇಸ್ವಿಯವರೆಗೂ ಅದು 1,127.64 ಕೋಟಿ ಹಣವನ್ನು ಈ ಯೋಜನೆಗಾಗಿ ಖರ್ಚು ಮಾಡಿತ್ತು. ಆದರೆ ವಿಧಾನ ಸಭೆಯಲ್ಲಿ ರಚನೆಯಾದ  ಸರ್ಕಾರಿ ಖರ್ಚುವೆಚ್ಚಗಳನ್ನು ಪರಮಾರ್ಶಿಸಲು ಅಧಿಕಾರ ಹೊಂದಿರುವ ಸಾರ್ವಜನಿಕ ಲೆಕ್ಕಪತ್ರ ಪರಿಶೀಲನಾ ಸಮಿತಿ(ಪಿಎಸಿ) ನೀಡಿರುವ ವರದಿಯ ಪ್ರಕಾರ ಈ ಸುಜಲಾಂ–ಸುಫಲಾಂ ಯೋಜನೆ ಜಾರಿಯಲ್ಲಿ ಸುಮಾರು 500 ಕೋಟಿಗಿಂತ ಹೆಚ್ಚಿನ ಭ್ರಷ್ಟಚಾರ ಆಗಿರುವುದನ್ನು ಬಯಲು ಮಾಡಿದೆ. ಆದರೆ ಬಿಜೆಪಿ ಸರ್ಕಾರವು ಈ ಲೆಕ್ಕಪತ್ರ ಪರಿಶೀಲನಾ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸದಂತೆ ತನ್ನ ಬಲವನ್ನು ಪ್ರಯೋಗಿಸಿ ಪ್ರಜಾಪ್ರಭುತ್ವದ ಬಾಯಿಗೆ ಬೀಗ ಹಾಕಿತು. ಇದಲ್ಲದೆ ಭಾರತದ ಮಹಾಲೆಕ್ಕಪರಿಶೋಧಕರ(ಸಿಎಜಿ) ವರದಿಯೂ ಸಹಾ ಈ ಯೋಜನೆ ಜಾರಿಯಲ್ಲಿ ಹಲವು ರೀತಿಯ ಹಣಕಾಸು ದುರುಪಯೋಗ ಆಗಿರುವುದನ್ನು ಪತ್ತೆ ಹಚ್ಚಿದೆ.

ಇದರ ಜೊತೆಯಲ್ಲೇ ಗುಜರಾತ್‌ನ ನರೇಂದ್ರ ಮೋದಿ ಸಚಿವ ಸಂಪುಟದ ಹಲವು ಸಚಿವರುಗಳು ಕುತ್ತಿಗೆ ಮಟ್ಟದ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಇತ್ತೀಚಿಗಷ್ಟೇ ಮೋದಿ ಸಂಪುಟದ ಹಿರಿಯ ಸಚಿವರೊಬ್ಬರು ಪೋರಬಂದರು ಕೋರ್ಟನಿಂದ ಭ್ರಷ್ಟಚಾರ ಪ್ರಕರಣದಲ್ಲಿ ಮೂರು ವರ್ಷ ಜೈಲುಶಿಕ್ಷೆಗೆ ಗುರಿಯಾಗಿದ್ದಾರೆ. ಜಲಸಂಪನ್ಮೂಲ ಸಚಿವಾಲಯದಲ್ಲಿ ನಡೆದ 54 ಕೋಟಿ ರೂಪಾಯಿಗಳ ಲೈಮ್‌ಸ್ಟೋನ್ ಗಣಿ ಹಗರಣದಲ್ಲಿ ಅವರು ಆರೋಪಿಯಾಗಿದ್ದರು. ಅವರೀಗ ಮಾಜಿ ಕಾಂಗ್ರೆಸ್ ಸಂಸದ ಭಾರತ್‌ವಡೆಧರ, ಗ್ಯಾಂಗ್‌ಸ್ಟಾರ್ ಭೀಮದುಲ ವಡೆಧರ ಮತ್ತು ಅವನ ಮಗ ಮತ್ತು ಪೋರಬಂದರು ಮಾರ್ಕೆಟಿಂಗ್ ಯಾರ್ಡ ಅಧ್ಯಕ್ಷನಾಗಿದ್ದ ಮತ್ತು ಇದೆ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿರುವ ಲಕ್ಷ್ಮಣ್‌ದುಲ ವಡೆಧರ ಅವರೊಂದಿಗೆ ಜೈಲಿನ ಒಂದೇ ಕೋಣೆಯಲ್ಲಿ ಸಹಖೈದಿಗಳಾಗಿ ಬದುಕು ಸಾಗಿಸುತ್ತಿದ್ದಾರೆ.

ಮೋದಿಯ ಮತ್ತೊಬ್ಬ ಮೀನುಗಾರಿಕೆ ಇಲಾಖೆ ಸಚಿವರಾದ ಪುರುಷೋತ್ತಮ ಸೋಲಂಕಿ ಸರ್ಕಾರದ ಬೊಕ್ಕಸಕ್ಕೆ ಸುಮಾರು 400 ಕೋಟಿ ಹಣವನ್ನು ನಷ್ಟ ಉಂಟುಮಾಡಿರುವ ಆರೋಪದಡಿಯಲ್ಲಿ ಅವರ ಮೇಲೆ ಕೇಸು ದಾಖಲಾಗಿದೆ. ರಾಜ್ಯದ ವಿವಿಧೆಡೆ ಇರುವ 50ಕ್ಕೂ ಹೆಚ್ಚಿನ ಜಲಾಶಯಗಳಲ್ಲಿ ಮೀನುಗಾರಿಕೆಗೆ ಅನುಮತಿ ನೀಡುವಾಗ ಯಾವುದೇ ಹರಾಜು ಪ್ರಕ್ರಿಯೆಗಳನ್ನು ನಡೆಸಲಿಲ್ಲ. ಇದರಿಂದಾಗಿ ಸರ್ಕಾರಿ ಬೊಕ್ಕಸ ಸೇರಬೇಕಾದ ಹಣ ದುರುಪಯೋಗವಾಗಿದೆ. ಈ ಸಚಿವರ ಮೇಲಿರುವ ಮತ್ತೊಂದು ಆರೋಪವೆಂದರೆ ಹಿಂದೆ ಮುಂಬೈ ಗಲಭೆ ತನಿಖೆಗಾಗಿ ನೇಮಿಸಿದ್ದ ನ್ಯಾ. ಶ್ರೀಕೃಷ್ಣ ಆಯೋಗವು ಮುಂಬೈ ಗಲಭೆಯಲ್ಲಿ ಸೋಲಂಕಿ ಪಾತ್ರದ ಬಗ್ಗೆ ಬೊಟ್ಟು ಮಾಡಿದೆ. ಅಂದರೆ ಕೋಮುವಾದ ಹಾಗೂ ಭ್ರಷ್ಟಚಾರದ ಎರಡೂ ವಿಷಗಳು ಇಲ್ಲಿ ಹೊಂದಾಣಿಕೆಯಾಗಿವೆ.

ಆಶ್ಚರ್ಯ ಮತ್ತು ಆಸಕ್ತಿಕರ ಸಂಗತಿ ಎಂದರೆ ಈ ಎರಡೂ ಸಚಿವರನ್ನು ಅವರ ಮೇಲೆ ಕೇಸುಗಳು ದಾಖಲಾಗಿದ್ದಾಗ್ಯೂ ಅವರನ್ನು ಮೋದಿ ಸಚಿವರನ್ನಾಗಿ ಮುಂದುವರೆಸಿದ್ದಾರೆ.

## 'ಇದು ಮೋದಿಯ ಸ್ವಚ್ಛ ಹಾಗೂ ಮಾದರಿ ಆಡಳಿತಕ್ಕೊಂದು ಉತ್ತಮ ಮಾದರಿಯಲ್ಲವೇ'?

ಮೇಲೆ ಹೇಳಿದ ಎಲ್ಲಾ ಹಗರಣಗಳಿಂದಾಗಿ ಗುಜರಾತ್ ರಾಜ್ಯ ಸರ್ಕಾರದ ಬೊಕ್ಕಸಕ್ಕಾಗಿರುವ ಒಟ್ಟಾರೆ ನಷ್ಟ ಸುಮಾರು ಒಂದು ಲಕ್ಷ ಕೋಟಿಯಷ್ಟು! ಇದು ಕೇವಲ ಅಂದಾಜು ಲೆಕ್ಕಚಾರವಷ್ಟೇ. ಗುಜಾರಾತ್‌ನಲ್ಲಿ ಕೈಗಾರಿಕಾಭಿವೃದ್ಧಿ ಹೆಸರಿನಲ್ಲಿ ನೀಡಲಾಗಿರುವ ರಿಯಾಯ್ತಿಯಿಂದಾಗಿ ಕೇವಲ 2012 ಮಾತ್ರವೇ ಸುಮಾರು 16000 ಕೋಟಿಯಷ್ಟು ಹಣ ಸರ್ಕಾರಕ್ಕೆ ನಷ್ಟವಾಗಿದೆ ಎಂದು ಭಾರತದ ಮಹಾಲೆಕ್ಕಪರಿಶೋಧಕರು(ಸಿಎಜಿ) ನೀಡಿರುವ ವರದಿ ಹೇಳುತ್ತಿದೆ.

ಮೋದಿಯ ಪ್ರಧಾನಮಂತ್ರಿ ಕನಸನ್ನು(ಮಹಾದಾಸೆಯನ್ನು) ನನಸಾಗಿಸಲು ಸಾವಿರಾರು ಕೋಟಿ ಹಣವನ್ನು ಖರ್ಚು ಮಾಡಲಾಗುತ್ತಿದೆ. ಹೀಗೆ ಖರ್ಚಾಗುತ್ತಿರುವ ಹಣವೆಲ್ಲಾ ಎಲ್ಲಿಂದ ಬರುತ್ತದೆ ಎಂಬುದನ್ನು ಊಹಿಸಿಕೊಳ್ಳುವುದಕ್ಕೆ ಕಷ್ಟಪಡಬೇಕಿಲ್ಲ ಅಲ್ಲವೇ?

## ಹಗರಣಗಳೇ ಯುಪಿಎ ಸರ್ಕಾರದ ಸಾಧನೆ :

ಯಪಿಎ ಸರ್ಕಾರದ ಈ ಅವಧಿಯಲ್ಲಿ ನಡೆದಿರುವ ಪ್ರಮುಖ ಮೂರು ಹಗರಣಗಳ ಒಟ್ಟು ಮೊತ್ತವೇ 4 ಲಕ್ಷ ಕೋಟಿ.!

ಭಾರತದ ಮಹಾಲೆಕ್ಕಪರಿಶೋಧಕರು(ಸಿಎಜಿ) ಅಂದಾಜು ಮಾಡಿರುವ ಪ್ರಕಾರ 2 ಜಿ ತರಗಾಂತರ ಹಗರಣ ಒಂದರಲ್ಲೇ ಸರ್ಕಾರಕ್ಕೆ ಆಗಿರುವ ಒಟ್ಟು ಮೊತ್ತ 1.76 ಲಕ್ಷ ಕೋಟಿ..

**ಅಂದರೆ....,**

- 2014–15 ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಶಿಕ್ಷಣಕ್ಕೆ ನಿಗದಿ ಮಾಡಿರುವ ಹಣದ ಎರಡು ಪಟ್ಟು.
- ಬಜೆಟ್‌ನಲ್ಲಿ ಆರೋಗ್ಯಕ್ಕಾಗಿ ನಿಗದಿ ಮಾಡಿರುವ ಹಣದ ಐದು ಪಟ್ಟು
- ದಲಿತರ ಕಲ್ಯಾಣಕ್ಕಾಗಿ ವಿನಿಯೋಗಿಸಿದ ಬಜೆಟ್ ಹಣದ ನಾಲ್ಕು ಪಟ್ಟು
- ಹಾಗೂ ಆದಿವಾಸಿಗಳ ಕಲ್ಯಾಣಕ್ಕಾಗಿ ವಿನಿಯೋಗಿಸಿದ ಹಣದ ನಾಲ್ಕರಷ್ಟು ಹಣವಾಗುತ್ತದೆ.

ಸರ್ಕಾರವು ಕೇಲವೇ ಕೆಲವು ಕಾರ್ಪೋರೆಟ್ ಕಂಪನಿಗಳ ಹಿತಾಸಕ್ತಿಗಾಗಿ ಮಾತ್ರವೇ ಇಂತಹ ನೀತಿಗಳನ್ನು ರೂಪಿಸಿ ಈ ಅಪಾರ ಪ್ರಮಾಣದ ನಷ್ಟವನ್ನುಂಟು ಮಾಡಿದೆ. ಈ ಪ್ರಕರಣದಲ್ಲಿ ಸರ್ಕಾರ ಯಾವುದೇ ಪಾರದರ್ಶಕತೆಯನ್ನು ಅನುಸರಿಸದೆ ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದಲ್ಲಿ ನಡೆದುಕೊಂಡಿದೆ. ಕೇಲವೇ ಕಾರ್ಪೋರೆಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ಟೆಂಡರ್ ದರ ಹಾಗು ದಿನಾಂಕವನ್ನು ಬದಲಾಯಿಸಲಾಯಿತು. ಈ ವಿಷಯಗಳನ್ನು ಸಿಪಿಐ(ಎಂ) ಪಾರ್ಲಿಮೆಂಟಿನೊಳಗೆ ಎತ್ತಿದ್ದರಿಂದಲೇ ಅದನ್ನು ಸಿಎಜಿಗೆ ಒಪ್ಪಿಸಲಾಯಿತು ಮತ್ತು ಆ ಮೂಲಕ ಭಾರೀ ಪ್ರಮಾಣದಲ್ಲಿ ನಡೆದಿರುವ ಮೋಸದ ಅಳವನ್ನು ಪತ್ತೆ ಹಚ್ಚಲಾಯಿತು. ಸಿಎಜಿ ವರದಿಯಲ್ಲಿ ಪತ್ತೆ ಹಚ್ಚಲಾದ ಪ್ರಕಾರ ಇದರ ಲಾಭವನ್ನು ಪಡೆದಿರುವ ಎರಡು ಕಂಪನಿಗಳೆಂದರೆ ಮೆ, ರೆಲೆಯಾನ್ಸ್ ಕಮ್ಯೂನಿಕೇಷನ್ ಲಿ, ಮತ್ತು ಹಾಗೆಯೇ ಅದೇ ರಿಲೆಯಾನ್ಸ್ ಒಡೆತನದ ಮೆ, ಸ್ವಾನ್ ಟೆಲಿಕಾಂ ಲಿ, ಕಂಪನಿಯೇ.! ಇದು ಕೇವಲ ವಯಕ್ತಿಕವಾಗಿ ಯಾವುದೇ ವ್ಯಕ್ತಿ ಅಥವಾ ಪಕ್ಷಕ್ಕೆ ಸಂಬಂಧಿಸದ ಪ್ರಶ್ನೆಯಲ್ಲ ಬದಲಾಗಿ ಈ ಹಗರಣದಲ್ಲಿ ಇಡೀ ಸರ್ಕಾರವೇ ಸ್ವತಃ ಭಾಗಿಯಾಗಿದೆ ಅಷ್ಟು ಮಾತ್ರವಲ್ಲ ಸರ್ಕಾರದ ಪ್ರಮುಖ ಆಡಳಿತ ಅಂಗವಾದ ಪ್ರಧಾನ ಮಂತ್ರಿ ಕಚೇರಿಯೇ ಇದರಲ್ಲಿ ಭಾಗಿಯಾಗಿರುವುದು ಸಾಭೀತಾಗಿದೆ.

## ಕಲ್ಲಿದ್ದಲು ಬ್ಲಾಕ್ ಹಂಚಿಕೆ ಹಗರಣ

ಕಲ್ಲಿದ್ದಲು ಹಗರಣ ಕುರಿತು ತನಿಖೆ ನಡೆಸಿದ ಮಹಾಲೆಕ್ಕ ಪರಿಶೋಧಕರ ವರದಿ ಹೇಳಿರುವಂತೆ ಕಲ್ಲಿದ್ದಲು ಬ್ಲಾಕ್‌ಗಳ ಹಂಚಿಕೆಯಲ್ಲಿ ಯಾವುದೇ ಪಾರದರ್ಶಕತೆಯನ್ನು ಅನುಸರಿಸಿಲ್ಲ. ಈ ರೀತಿಯ ಹಂಚಿಕೆಯಿಂದಾಗಿ ಕಾರ್ಪೋರೆಟ್ ಕಂಪನಿಗಳಿಗೆ ಆಗಿರುವ ಒಟ್ಟು ಲಾಭ ಸುಮಾರು 1.86 ಲಕ್ಷ ಕೋಟಿ.! ಕಲಿದ್ದಲು ಈ ಹಗರಣದ ಹಿಂದಿರುವ ಪ್ರಮುಖ ಪ್ರಯತ್ನವೆಂದರೆ ಸಾರ್ವಜನಿಕ ವಲಯದಲ್ಲಿರುವ ಕಲ್ಲಿದ್ದಲು ಕೇತ್ರವನ್ನು ಖಾಸಗಿಯವರಿಗೆ ವಹಿಸಿಕೊಡುವ ಹುನ್ನಾರವಿದೆ. ಇದರಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳು ಭಾಗಿಗಳಾಗಿವೆ.

**ಕಾಮನ್‌ವೆಲ್ತ್ ಗೇಮ್ ಹಗರಣ :**

ಸ್ವತಃ ಯಪಿಎ ಸರ್ಕಾರದ ನಾಯಕರುಗಳೇ ಭಾಗೀದಾರರಾಗಿರುವ ಎರಡು ಪ್ರಮುಖ ಹಗರಣಗಳೆಂದರೆ ಕಾಮನ್‌ವೆಲ್ತ್ ಗೇಮ್ ಹಗರಣ ಮತ್ತು ಆದರ್ಶ ಹೌಸಿಂಗ್ ಸೋಸೈಟಿ ಹಗರಣಗಳು. ನಮ್ಮ ದೇಶಕ್ಕೆ 2003 ರಲ್ಲಿ ಕಾಮನ್ ವೆಲ್ತ್ ಗೇಮ್ಸ್ ನೆಡೆಸುವ ಆತಿಥ್ಯದ ಅವಕಾಶ ದೊರೆತಾಗ ಅದರ ಒಟ್ಟು ವೆಚ್ಚ 1899 ಕೋಟಿ ಎಂದು ಅಂದಾಜು ಮಡಲಾಗಿತ್ತು. ಆದರೆ 2010 ಇಸ್ವಿಯಲ್ಲಿ ಇದನ್ನು ಆಯೋಜಿಸಿ ನಡೆಸಿದಾಗ ಅದಕ್ಕೆ ಆಗಿರುವ ವೆಚ್ಚವೆಷ್ಟು ಗೋತ್ತೆ? 70,000 ಕೋಟಿಗಳು. ಅಂದರೆ ಹಿಂದೆ ಅಂದಾಜು ಮಾಡಿದ್ದಕ್ಕಿಂತ 37 ಪಟ್ಟು ಹೆಚ್ಚು! ಇದೇ ಗೇಮ್ಸ್‌ಗಳು ಆಸ್ಟ್ರೇಲಿಯಾದ ಮೆಲ್ಬನ್‌ನಲ್ಲಿ ಹಿಂದೆ ನಡೆದಾಗ ಆದ ವೆಚ್ಚ 5200 ಕೋಟಿಗಳು ಮಾತ್ರ. ಅಂದರೆ ನಮ್ಮ ದೇಶದಲ್ಲಿ ಈ ಕಾಮನ್ ವೆಲ್ತ್ ಗೇಮ್ಸ್ ನಡೆಸಿ ಎಷ್ಟೊಂದು ಪ್ರಮಾಣದ ಹಣವನ್ನು ದುರುಪಯೋಗಪಡಿಸಿ ನಷ್ಟ ಉಂಟು ಮಾಡಲಾಗಿದೆ ಎಂಬುದನ್ನು ನಾವೇ ಊಹಿಸಿಕೊಳ್ಳಬೇಕು.

**ಆದರ್ಶ ಹೌಸಿಂಗ್ ಸೋಸೈಟಿ ಹಗರಣ :**

ಇದು ಯಪಿಎ ಸರ್ಕಾರದ ಶೋಕೇಸ್‌ನಲ್ಲಿರುವ ಮತ್ತೊಂದು ಹಗರಣ. ಈ ಯೋಜನೆ ಜಾರಿಯಲ್ಲಿ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಲಾಗಿದೆ. ಕಾರ್ಗಿಲ್ ಮತ್ತಿತರೆ ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗಾಗಿ ನಿರ್ಮಾಣ ಮಾಡಲಾದ ಈ ಪ್ಲಾಟ್‌ಗಳನ್ನು ಒಬ್ಬರೇ ಒಬ್ಬ ವಿಧವೆಯರಿಗೆ ನೀಡಲಾಗಿಲ್ಲ. ಬದಲಾಗಿ ಇಲ್ಲಿ ನಿರ್ಮಾಣವಾದ ಮನೆಗಳನ್ನು ಭ್ರಷ್ಟ ರಾಜಕಾರಣಿಗಳು, ಸೇನೆಯ ವಿವಿಧ ಉನ್ನತ ಶ್ರೇಣಿಯ ಅಧಿಕಾರಿಗಳು ಕೈವಶ ಮಾಡಿಕೊಂಡಿದ್ದಾರೆ. ಅಲ್ಲಿ ನಿರ್ಮಿಸಲಾದ ಮನೆಗಳ ನಿಜವಾದ ಮಾರುಕಟ್ಟೆ ಮೌಲ್ಯ 8–10 ಕೋಟಿಯಾದರೆ ಅವುಗಳನ್ನು ಅತ್ಯಂತ ಕಡಿಮೆ ಬೆಲೆಗೆ  ಅಂದರೆ ಕೇವಲ 60–80 ಲಕ್ಷಗಳಿಗೆ ರಾಜಕಾರಣಿಗಳು, ಸೇನೆಯ ವಿವಿಧ ಉನ್ನತ ಶ್ರೇಣಿಯ ಅಧಿಕಾರಿಗಳು ಕೊಂಡುಕೊಂಡಿದ್ದರು. ಈ ಎಲ್ಲಾ ಮನೆಗಳನ್ನು ನಿರ್ಮಿಸುವಾಗ ಅನುಸರಿಸಬೇಕಾದ ಪರಿಸರ ಸಂಬಂಧಿ ಮತ್ತು ಕಟ್ಟಡ ನಿರ್ಮಾಣದಲ್ಲಿ ಎಲ್ಲಾ ನಿಯಮಾವಳಿಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ. ಈ ಹಗರಣದಲ್ಲಿ ಮಹಾರಾಷ್ಟ್ರದ ಅಂದಿನ ಮುಖ್ಯಮಂತ್ರಿಯಾಗಿ ಪ್ರಮುಖ ಕಾಂಗ್ರೆಸ್ ನಾಯಕರು ಮಾತ್ರವಲ್ಲ ಅಲ್ಲಿನ ಎನ್‌ಸಿಪಿ ಹಾಗೂ ಶಿವಸೇನಾ ನಾಯಕರುಗಳು ಪಾಲುದಾರಾಗಿರುವ ಆರೋಪ ಹೊಂದಿದ್ದಾರೆ.

**ಐಪಿಎಲ್‌ನಲ್ಲೂ ಮ್ಯಾಚ್ ಫಿಕ್ಸಿಂಗ್ :**

ಈ ಅವಧಿಯಲ್ಲಿ ಹವ್ಯಾಸಿ ಕ್ಷೇತ್ರಗಳಾದ ಮನೋರಂಜನೆ, ಕ್ರೀಡೆ ಹಾಗೂ ಆರೋಗ್ಯ, ಕ್ಷೇತ್ರಗಳನ್ನು ಭ್ರಷ್ಟಚಾರದಿಂದ ಮುಕ್ತವಾಗಿರಿಸಿಲ್ಲ ಇದಕ್ಕೆ ಕಾರಣವಾದ ನವ ಉದಾರೀಕರಣ ನೀತಿಗಳಿಗೆ ನಾವು ಧನ್ಯವಾದಗಳನ್ನು ಸಲ್ಲಿಸಬೇಕು. ಇಂಡಿಯನ್ ಪ್ರೀಮಿಯರ್

ಲೀಗ್(ಐಪಿಎಲ್) ಮುತುವರ್ಜಿಯಲ್ಲಿ ಕ್ರಿಕೆಟ್ ಅಭೂತಪೂರ್ವ ಹಂತಗಳನ್ನು ತುಪಿತು. ಇದರ ಜೊತೆಯಲ್ಲಿ ಬೆಟ್ಟಿಂಗ್ ಮತ್ತು ಮ್ಯಾಚ್‌ಫಿಕ್ಸಿಂಗ್‌ಗಳು ಚಾಲನೆಗೆ ಬಂದವು.ಈ ಮೂಲಕ ಸಾವಿರಾರು ಕೋಟಿಗಳ ಈ ಕುತ್ತಿಗೆ ಮಟ್ಟದ ಈ 'ಕ್ರಿಕೆಟ್ ರಾಜಕೀಯ' ಹಗರಣಗಳ ನಡೆದು ಇದರಲ್ಲಿ ಹಿರಿಯ ಬಿಸಿಸಿಐ ಅಧಿಕಾರಿಗಳು ಕಾಂಗ್ರೆಸ್–ಬಿಜೆಪಿ ನಾಯಕರುಗಳು ಪಾಲು ಹಂಚಿಕೊಂಡಿದ್ದಾರೆ.

**'ತೃಣಮೂಲ ಕಾಂಗ್ರೆಸ್‌ನ ಶಾರದಾ ಚಿಟ್ ಫಂಡ್ ಹಗರಣ'**

ಮೇಲೆ ವಿವರಿಸಲಾದ ಎಲ್ಲಾ ಹಗರಣಗಳು ಇಡೀ ದೇಶವನ್ನೇ ಅಲ್ಲೋಲ ಕಲ್ಲೋಲ ಮಾಡಿದವು. ಇನ್ನೂ ಇವುಗಳಲ್ಲದೆ ಪಶ್ಚಿಮ ಬಂಗಾಳದಲ್ಲಿ ತೃಣ ಮೂಲ ಕಾಂಗ್ರೆಸ್‌ನ ಕೃಪಕಟಾಕ್ಷದಲ್ಲಿ ನಡೆದ ಮತ್ತೊಂದು ಹಗರಣ ದೇಶದ ಗಮನ ಸೆಳೆಯಿತು ಅದೇ ಶಾರದಾ ಚಿಟ್‌ಫಂಡ್ ಹಗರಣ. ನೂರಾರು ಕೋಟಿ ಹಣವನ್ನು ಶಾರದಾ ಚಿಟ್ ಫಂಡ್‌ನಲ್ಲಿ ಸಾವಿರಾರು ಬಡ ನಾಗರೀಕರು ಹೂಡಿಕೆ ಮಾಡಿದ್ದರು. ಆದರೆ ಅದು ದಿವಾಳಿಯಾದಾಗ ಹತ್ತಾರು ಖಾತೆದಾರರು ಆತ್ಮಹತ್ಯೆಯತ್ತ ಮುಖ ಮಾಡಿದರು. ಆದರೆ ಅಲ್ಲಿನ ತೃಣಮೂಲ ಕಾಂಗ್ರೆಸ್ ಸರ್ಕಾರ ಅವರ ಬೆಂಬಲಕ್ಕೆ ಬರುವ ಬದಲು ಆ ಚಿಟ್ ಫಂಡ್ ಹಗರಣದಲ್ಲಿ ಭಾಗಿಗಳಾದವರ ಜೊತೆ ಕೈ ಜೋಡಿಸಿತು ಇದರಲ್ಲಿ ಹಲವು ಮಾಧ್ಯಮದವರು ಸೇರಿದರು. ಈ ಸಂಬಂಧ ಇದರಲ್ಲಿ ಭಾಗಿಯಾದ ಕಾರಣಕ್ಕೆ ತೃಣಮೂಲದ ಸಂಸದನೊಬ್ಬ ಬಂಧನಕ್ಕೊಳಗಾದ. ಆದಾಗ್ಯೂ ಸ್ವತಃ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯೇ ಆ ಕಂಪನಿಯ ರಕ್ಷಣೆಗೆ ಟೊಂಕಕಟ್ಟಿ ನಿಂತರು. ಇದಲ್ಲದೆ ಇದೇ ಕಂಪೆನಿಯೂ ಬಿಹಾರ,ಒರಿಸ್ಸಾ, ತ್ರಿಪುರ, ಅಸ್ಸಾಂ ಇತರೆ ರಾಜ್ಯಗಳಲ್ಲಿರುವ ಶಾಖೆಗಳಲ್ಲೂ ಇದೇ ರೀತಿಯ ಅವ್ಯವಹಾರ ನಡೆಸಿರುವುದು ಪತ್ತೆಯಾದವು. ಆಗಾಗಿ ಅಲ್ಲಿನ ಮುಖ್ಯಮಂತ್ರಿಗಳೆಲ್ಲಾ ಈ ಪ್ರಕರಣದ ಸಿಬಿಐ ತನಿಖೆಗೆ ಆಗ್ರಹಿಸಿದರು ಆದರೆ ಮಮತಾಬ್ಯಾನರ್ಜಿ ಸರಕಾರ ಅದಕ್ಕೆ ಕಿವಿಗೊಡದೇ ಆ ಬೇಡಿಕೆಯನ್ನು ತಿರಸ್ಕರಿಸಿತು. ಪ. ಬಂಗಾಳದಲ್ಲಿ ಮುವತ್ತು ವರ್ಷಗಳ ಈ ಹಿಂದಿನ ಎಡರಂಗ ಸರ್ಕಾರ ಭ್ರಷ್ಟಚಾರ ರಹಿತ ಆಡಳಿತಕ್ಕೆ ಖ್ಯಾತಿಯಾಗಿದ್ದರೆ, ಅಧಿಕಾರಕ್ಕೆ ಬಂದ ಕೇವಲ ಎರಡು ವರ್ಷದೊಳಗಾಗಿಯೇ ತೃಣಮೂಲ ಭ್ರಷ್ಟಚಾರಿಗಳ ಪರವಾಗಿ ನಿಂತು ತನ್ನ ಬಣ್ಣ ಬಯಲು ಮಾಡಿಕೊಂಡಿದೆ.

**'ಕೇರಳದಲ್ಲಿ ಸೋಲಾರ್ ಹಗರಣ'**

ಕೇರಳದಲ್ಲಿ ನಡೆದಿರುವ ಸೋಲಾರ ಹಗರಣವು ಆಡಳಿತರೂಢ ಯುಡಿಎಫ್ ಭ್ರಷ್ಟತೆಗೆ ಸಾಕ್ಷಿಯಾಗಿದೆ. ಇದರಲ್ಲಿ ಕಾಂಗ್ರೆಸ್ ನಾಯಕರುಗಳು ನೇರ ಆರೋಪಿಗಳೆಂಬ ಹಣೆ ಪಟ್ಟಿ ಹೊತ್ತಿದ್ದಾರೆ. ಆದಾಗ್ಯೂ ಕಾಂಗ್ರೆಸ್‌ನ ಮೇಲ್ಪಟ್ಟದ ಹಾಗೂ ರಾಜ್ಯ ಮಟ್ಟದ ನಾಯಕರುಗಳು ಭ್ರಷ್ಟಚಾರದ ಆರೋಪ ಹೊತ್ತ ಈ ನಾಯಕರ ರಕ್ಷಣೆಗಾಗಿ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

**ಭ್ರಷ್ಟಚಾರದ ವಿರುದ್ದ ಸಿಪಿಐ(ಎಂ) ದೃಢ ಹೋರಾಟ :**

ದೇಶದಲ್ಲಿ ಎಡಪಕ್ಷಗಳು ಮಾತ್ರವೇ ಭ್ರಷ್ಟಚಾರದ ವಿರುದ್ದ ನಡೆಯುತ್ತಿರುವ ಈ ಹೋರಾಟದಲ್ಲಿ ನುಡಿದಂತೆ ನಡೆಯುವ ಪಕ್ಷಗಳಾಗಿವೆ. ರಾಜಕೀಯದ ಎಲ್ಲಾ ಹಂತಗಳಲ್ಲೂ ಅತ್ಯಂತ ಪ್ರಾಮಾಣಿಕತೆ, ಮೌಲ್ಯ ಹಾಗೂ ಸಾರ್ವಜನಿಕ ಬದುಕಿನಲ್ಲಿ ಪರಾದರ್ಶಕತೆಯನ್ನು ಕಾಪಾಡುವಲ್ಲಿ ಎಡಪಕ್ಷಗಳು ಸದಾ ಮುಂಚೂಣಿಯಲ್ಲಿವೆ.

ಸಿಪಿಐ(ಎಂ) ಭ್ರಷ್ಟಚಾರದ ವಿರುದ್ದ ಒಂದು ಕಠಿಣ ಕಾನೂನು ಜಾರಿಯಾಗಬೇಕೆಂದು ಬಯಸುತ್ತದೆ. ಇಂತಹ ಕಾನೂನಿನ ಅಡಿಯಲ್ಲಿ ದೇಶದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಖಾಸಗೀ ದೊಡ್ಡ ಕಂಪನಿಗಳ ವ್ಯವಹಾರಗಳು, ಖಾಸಗೀ–ಸಾರ್ವಜನಿಕ ಯೋಜನೆಗಳ ಎಲ್ಲಾ ಹಣಕಾಸು ವ್ಯವಹಾರಗಳು ಪರಿಶೀಲನೆಗೊಳಪಡಬೇಕೆಂಬುದು ಸಿಪಿಐ(ಎಂ) ಆಗ್ರಹವಾಗಿದೆ. ಇದಕ್ಕಾಗಿ ಒಂದು ಬಲಿಷ್ಟ ಲೋಕಪಾಲ ಮಸೂದೆಯನ್ನು ರಚಿಸುವ ಬದ್ದತೆಯನ್ನು ಹೊಂದಿದೆ. ಆದರೆ ಲೋಕಪಾಲ ಸ್ಥಾಪನೆಯೊಂದಿಗೆ ಭ್ರಷ್ಟಚಾರದ ವಿರುದ್ದದ ಹೋರಾಟ ಕೊನೆಗೊಳ್ಳುವುದಿಲ್ಲ. ಸಾರ್ವಜನಿಕ ಜೀವನದ ಎಲ್ಲಾ ಹಂತಗಳಲ್ಲೂ ಭ್ರಷ್ಟಚಾರ ಮುಕ್ತವಾಗಿ ಎಲ್ಲಾ ಕಾರ್ಯಗಳು ಜಾರಿಯಾಗಬೇಕು ಮತ್ತು ಭ್ರಷ್ಟಚಾರದಲ್ಲಿ ಭಾಗೀಯಾದವರ ವಿರುದ್ದ ಕಠಿಣ ಕಾನೂನು ಕ್ರಮಜರುಗಿಸಬೇಕು ಎಂಬುದಕ್ಕೆ ಸಿಪಿಐ(ಎಂ) ಬದ್ದವಾಗಿದೆ.

ಅದೇ ವೇಳೆಗೆ ನಮ್ಮ ದೇಶದ ಅಪಾರ ಸಂಪನ್ಮೂಲಗಳನ್ನು ಮುಕ್ತವಾಗಿ ಮನಬಂದಂತೆ ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿರುವ ಉದಾರಿಕರಣ ನೀತಿಗಳನ್ನು ಬದಲಾಯಿಸಲು ತಾನು ನಡೆಸುತ್ತಿರುವ ಹೋರಾಟಗಳನ್ನು ಮತ್ತಷ್ಟು ಬಲಪಡಿಸಲು ಸಿಪಿಐ(ಎಂ) ನಿರ್ಧರಿಸಿದೆ. ಜೊತೆಯಲ್ಲಿ ಭ್ರಷ್ಟ ದೊಡ್ಡ ಬಂಡವಾಳಿಗರು, ರಾಜಕಾರಣಿಗಳು ಹಾಗೂ ಅಧಿಕಾರಶಾಹಿಗಳ ನಡುವೆ ಏರ್ಪಟ್ಟಿರುವ ಅನೈಕ್ಯತೆಯ ಸಂಬಂಧವನ್ನು ಹೊಡೆದು ಹಾಕಲು ಬಯಸುತ್ತದೆ.

ಸಧ್ಯ ತ್ರಿಪುರಾದಲ್ಲಿರುವ ಎಡರಂಗ ಸರ್ಕಾರವು ಇಡೀ ದೇಶದಲ್ಲೇ ಅತ್ಯಂತ ಪ್ರಮಾಣಿಕತೆಗೆ ಹೆಸರಾಗಿದ್ದು ಜನಪರವಾದ ನೀತಿಗಳನ್ನು ಜಾರಿಗೊಳಿಸುತ್ತಾ ಆ ಎಡ ಸಂಪ್ರದಾಯವನ್ನು ಮುಂದುವರೆಸಲು ಬಯಸುತ್ತಿದೆ.

ಮಾನ್ಯ ಮತದಾರ ಬಂಧುಗಳೇ...

ದೇಶದ ಭವಿಷ್ಯ ನಿಮ್ಮಗಳ ಕೈಲಿದೆ...

ಆದ್ದರಿಂದ ಸಿಪಿಐ(ಎಂ)ಗೆ ಮತ ನೀಡಿ ಎಡಪಕ್ಷಗಳನ್ನು ಬಲಪಡಿಸಿ..

ಆ ಮೂಲಕ ಭ್ರಷ್ಟಚಾರ ಮುಕ್ತ ಭಾರತವನ್ನು ನಿರ್ಮಿಸೋಣ...

ಅನುವಾದ: **ಕೆ.ಮಹಾಂತೇಶ್**

# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಮೂಲ:
ಸಿಪಿಐ(ಎಂ) ಕೇಂದ್ರ ಸಮಿತಿ, ನವದೆಹಲಿ

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು
ಪ್ರತಿಗಳು: 5,000